ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 89-93
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಡಾ.ಕೆ.ಎನ್.ಗಣೇಶಯ್ಯನವರ ಕಥೆಗಳಲ್ಲಿನ ಹೊಸ ಸಾಧ್ಯತೆಗಳು

**ಸಚಿನ್ ಜಿ. ಹೆಚ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

***Abstract:***
*ಸಾಹಿತ್ಯವು ನಿಂತ ನೀರಲ್ಲ ನಿತ್ಯ ಹರಿಯುವ ಹೊಳೆಯಂತೆ, ಇವತ್ತೀನವರೆಗೂ ಕೂಡ ಆಯಾ ಯುಗದ ಸಾಹಿತ್ಯವು ಆಯಾ ಕಾಲದ ಯುಗಧರ್ಮವನ್ನ ಅನುಸರಿಸಿ ಬಂದಿರುವುದನ್ನು ಕಾಣಬಹುದು. ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಸಣ್ಣ ಕತೆಯು ಕೂಡ ಇಲ್ಲಿಯ ತನಕ ಕನ್ನಡದಲ್ಲಿ ವೈವಿಧ್ಯಮಯ ಸಣ್ಣಕಥೆಗಳು ಪ್ರಕಟಗೊಂಡಿರುವುದನ್ನು ಕಾಣುತ್ತೇವೆ. ನವೋದಯ ಕಾಲಘಟ್ಟದಲ್ಲಿ ರೋಮ್ಯಾಂಟಿಕ್ ವಿಚಾರಧಾರೆಗಳು ಗೋಚರವಾದವು, ಪ್ರಗತಿಶೀಲ ಪಂಥದಲ್ಲಿ ಮಾರ್ಕ್ಸವಾದ ಸಾಮಾಜಿಕ ದೃಷ್ಟಿಕೋನ ಕಂಡರೆ, ನವ್ಯಮಾರ್ಗದಲ್ಲಿ ಮನಶಾಸ್ತ್ರೀಯ ಹಿನ್ನೆಲೆಯ ಸಂಕೀರ್ಣ ಸಂಗತಿಗಳು ಮುನ್ನಲೆಗೆ ಬಂದವು. ನಂತರ ದಲಿತ ಬಂಡಾಯವು ಸಮಾಜದ ಪುನರ್ ನಿರ್ಮಾಣ ಸಂಗತಿಗಳಿಗೆ ವಿಶೇಷ ಮಹತ್ವ ದೊರಕಿತು, ಆ ನಂತರ ಕಾಲಘಟ್ಟದಲ್ಲಿ ಸಣ್ಣಕಥೆ ಸೃಷ್ಟಿಯಾಯಿತಾದರೂ ಅದರ ದಿಕ್ಕೇ ಬದಲಾಯಿತು, ನಂತರದಲ್ಲಿ ಯಾವುದೇ ಪಂಥ, ಚಳುವಳಿಯಿಂದ ದೂರವಿದ್ದೂ ತಮ್ಮ ಪಾಡಿಗೆ ತಾವು ಬರೆದವರಿದ್ದಾರೆ. ಈ ಲೇಖನದಲ್ಲಿ ಡಾ.ಕೆ.ಎನ್.ಗಣೇಶಯ್ಯನವರ ಕೆಲವು ಕತೆಗಳಲ್ಲಿ ಚಾರಿತ್ರಿಕ ಸ್ವರೂಪವನ್ನ ವಿವೇಚಿಸಲಾಗಿದೆ.*

***Keywords:*** *ಕಥನ ಸಾಹಿತ್ಯ. ಕೆ.ಎನ್.ಗಣೇಶಯ್ಯ, ಪದ್ಮಪಾಣಿ, ಕೆರಳಿದ ಕರಳು, ಮರಳ ತೆರೆಗಳೊಳಗೆ*

**ಪೀಠಿಕೆ**

ಸಮಕಾಲೀನ ಬದುಕನ್ನ ಸೂಕ್ಷ್ಮನೆಲೆಯಲ್ಲಿ ವೀಕ್ಷಿಸಿ ಕಲಾತ್ಮಕತೆಯ ಎಚ್ಚರವನ್ನು ಇಟ್ಟುಕೊಂಡು ಕಥನವಾಗಿಸುವ ಸಮರ್ಥ ಕತೆಗಾರರಿದ್ದಾರೆ ಹಾಗಾಗಿ ಇವತ್ತಿನ ಬರಹಗಾರರು ತಮ್ಮ ಕಾಲದ ಸಮಸ್ಯೆಗಳಿಗೆ, ಸವಾಲುಗಳಿಗೆ ಮುಖಾಮುಖಿಯಾಗಿದ್ದಾರೆ. ವಿಚಿತ್ರ ಸನ್ನಿವೇಶಗಳ ಕಾಲಘಟ್ಟ ಇದಾಗಿದೆ. ಬಡತನ, ಜಾತೀಯತೆ, ಪರತಂತ್ರ, ನಿರುದ್ಯೋಗ, ಕೌಟುಂಬಿಕ ಸಮಸ್ಯೆ ಒಳಗೊಳ್ಳುತ್ತಿರುವುದರಿಂದ ಕಥನ ಸಾಹಿತ್ಯ ಸಾಂಸ್ಕೃತಿಕ ಚರಿತ್ರೆಯಾಗಿ ರೂಪುಗೊಳ್ಳುತ್ತಿದೆ, ಸಮಾಜದ ಹಲವು ಮುಖಗಳು ಕಥನದೊಳಗೆ ಪ್ರವೇಶ ಪಡೆಯುತ್ತಿವೆ.

ನಗರ ಬದುಕಿನ ಜಂಜಾಟ, ಮುಜುಗರ, ಬೇಸರ, ಆಯಾಸ, ಭಯ, ನಿರಾಶೆ, ಆತಂಕ, ಸಂಬಂಧ, ಸಂಘರ್ಷ, ಸಾಮರಸ್ಯ, ಜನಪರ ಜೀವಪರತೆಯ ಕಾಳಜಿ ಇತ್ಯಾದಿ ಮನುಷ್ಯ ಬದುಕಿನ ಹಲವು ಲೋಕಗಳನ್ನು ಇವತ್ತಿನ ಕತೆಗಳು ನಮ್ಮ ಮುಂದೆ ಬಿಚ್ಚಿಡುತ್ತಿವೆ. ಪರಿಸರ ನಾಶ, ನಕ್ಸಲೀಯರ ಸಮಸ್ಯೆ, ಜಾಗತೀಕರಣ ಪ್ರಭಾವ, ಗಂಡ ಹೆಂಡತಿಯರ ನಡುವಿನ ಬಿರುಕು, ವಿಚ್ಛೇದನ, ವೃದ್ಧಾಶ್ರಮ ಸೇರುವ

***Please cite this article as:*** ಸಚಿನ್ ಜಿ. ಹೆಚ್. (2024). ಡಾ.ಕೆ.ಎನ್.ಗಣೇಶಯ್ಯನವರ ಕಥೆಗಳಲ್ಲಿನ ಹೊಸ ಸಾಧ್ಯತೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 3(3), 89–93

ತಂದೆ ತಾಯಿಗಳ ಕಷ್ಟ, ಕಾರ್ಪೋರೇಟ್ ಸಂಸ್ಕೃತಿ ಇತ್ಯಾದಿಗಳನ್ನು ಚಿತ್ರಿಸುವ ಕಥನಗಳು ಹೊರಬಂದಿವೆ.

ಪ್ರಸ್ತುತ ದಿನಮಾನಗಳಲ್ಲಿ ಆಗುತ್ತಿರುವ ಪಲ್ಲಟಗಳು, ಲೋಕಗ್ರಹಿಕೆಯಲ್ಲಿ ಆದ ಬದಲಾವಣೆಗಳು ಕೂಡ ಕಾರಣ, ನಿರ್ದಿಷ್ಟ ಲೋಕ ಗ್ರಹಿಕೆ ಕ್ರಮಕ್ಕೆ ಬದಲಾಗಿ ಬಹುಮಾದಿಯ ಕಥನ ಕ್ರಮಗಳನ್ನು ಅನುಸರಿಸುತ್ತಿರುವುದು ಗೋಚರವಾಗುವ ಅಂಶವಾಗಿದೆ.

ಚರಿತ್ರೆ ಮತ್ತು ಸಾಹಿತ್ಯ ಒಂದಕ್ಕೊಂದು ಪೂರಕ ಕ್ಷೇತ್ರಗಳು. ಇವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಚರಿತ್ರೆ ಗತಕಾಲದ ಅನುಭವವನ್ನು ನೀಡಿದರೆ ಸಾಹಿತ್ಯ ಗತಕಾಲದ ಅನುಭವದ ಮೂಲಕ ವರ್ತಮಾನವನ್ನು ನೋಡುವುದರೊಂದಿಗೆ ಭವಿಷ್ಯತ್ತನ್ನು ನಿರ್ಮಿಸಿಕೊಳ್ಳುವ ಮಾರ್ಗೋಪಾಯಗಳನ್ನು ನೀಡುತ್ತದೆ. ಈ ಹಿನ್ನೆಲೆಯಲ್ಲಿ ಚರಿತ್ರೆಯನ್ನ ಪುನರ್‌ರಚಿಸುವ ಪುರಾಣದೊಳಗಿನ ಅವಾಸ್ತವ ಸಂಗತಿಗಳನ್ನು ಹಾಗೂ ವಾಮಮಾರ್ಗೋಪಾಯಗಳನ್ನು ನೀಡುತ್ತದೆ.

ಈ ಹಿನ್ನೆಲೆಯಲ್ಲಿ ಚರಿತ್ರೆಯನ್ನ ಪುನರ್‌ರಚಿಸುವ ಪುರಣದೊಳಗಿನ ಅವಾಸ್ತವ ಸಂಗತಿಗಳನ್ನು ವೈಚಾರಿಕ ನೆಲೆಯಲ್ಲಿ ಅರ್ಥೈಸುವ ಕೆಲಸವೂ ನಡೆಯುತ್ತಾ ಬಂದಿದೆ. ಪರಂಪರೆಯನ್ನ ಅರ್ಥೈಸಿಕೊಳ್ಳಲು ಚರಿತ್ರೆಯ ಗ್ರಹಿಕೆ ತೀರಾ ಅಗತ್ಯವೆಂಬುದನ್ನು ಕೆ.ಎನ್ ಗಣೇಶಯ್ಯನವರ ಕಥೆಗಳು ಮನವರಿಕೆ ಮಾಡಿಕೊಡುತ್ತವೆ .ಕೆ.ಎನ್ ಗಣೇಶಯ್ಯನವರ ವೃತ್ತಿಯಿಂದ ಕೃಷಿ ವಿಜ್ಞಾನಿ. ಇವರ ಕಥಾ ಸಾಹಿತ್ಯವು ಹೊಸ ವಿಷಯ, ಹೊಸ ನಿರೂಪಣೆಯ ಮೂಲಕ ಓದುಗ ವರ್ಗವನ್ನು ದಿಗ್ಭ್ರಮೆಗೊಳಿಸಿದ್ದಾರೆ. ಚರಿತ್ರೆಯ ಹಿಂದಿರುವ ಕಟುಸತ್ಯಗಳನ್ನು ವಿವರಿಸುತ್ತಾ ಇತಿಹಾಸದ ಮೂಲಕ ಕಥೆಯ ಸನ್ನಿವೇಶಗಳನ್ನು ರೋಮಾಂಚಕಾರಿಯಾಗಿಯೂ ಕಟ್ಟುತ್ತಾರೆ. ಈ ಲೇಖನದಲ್ಲಿ ಗಣೇಶಯ್ಯನವರ ಕೆಲವು ಕತೆಗಳಲ್ಲಿ ಚಾರಿತ್ರಿಕ ಸ್ವರೂಪವನ್ನ ಇಲ್ಲಿ ವಿವೇಚಿಸಲಾಗಿದೆ.

**ಪದ್ಮಪಾಣಿ**

ಗಣೇಶನಯ್ಯನವರು ಪದ್ಮಪಾಣಿ ಕಲಾಕೃತಿಯ ಚರಿತ್ರೆಯನ್ನು ಅನ್ವೇಷಿಸುವ ಮೂಲಕ ಚರಿತ್ರೆಯಲ್ಲಿ ಮಿತಿಗಳನ್ನು ಈ ಕತೆಯಲ್ಲಿ ವ್ಯಕ್ತಗೊಳಿಸುತ್ತಾರೆ. ಅಜಂತ ಗುಹೆಗಳಲ್ಲಿರುವ ಪ್ರಪಂಚ ಪ್ರಸಿದ್ಧವಾದ ಪದ್ಮಪಾಣಿಯ ಚಿತ್ರವು ಬೋಧಿಸತ್ವನ ಪ್ರತಿರೂಪವಾದರೆ ಅದರಲ್ಲೇಕೆ ಗಂಡು ಚಿತ್ರದ ಮುಖದಲ್ಲಿ ಹೆಣ್ಣಿನ ಸೌಂದರ್ಯವಿದೆ? ಆಕಾರವೇಕೆ ಬಳುಕುವ ಹೆಣ್ಣಿನ ದೇಹ. ವಾಕಟಕ ರಾಜರು ಹಿಂದೂ ಧರ್ಮದವರು ಅವರೇಕೆ ಗುಹಾಂತರ ವಿಹಾರ ಕಟ್ಟಿದರು? ಹರಿಸೇನನ ರಾಣಿ ಕಮಲಾಂಬಿಕೆ ಬೌದ್ಧ ಧರ್ಮದವಳಲ್ಲ ಆದರೂ ಆಕೆ ಹರಿಸೇನನಿಗೇಕೆ ವಿಹಾರ ಗೃಹ ಕಟ್ಟಿಸಲು ಪ್ರೇರೆಪಿಸುತ್ತಾಳೆ. ವಿಹಾರ ಗುಹೆಗಳಲ್ಲಿ ಬಿತ್ತಿಗಳ ಚಿತ್ರಣ ಕಾರ್ಯವಹಿಸಿಕೊಂಡಿದ್ದ ವಿಷ್ಣುಶರ್ಮನಿಗೇಕೆ ಕಮಲಾಂಬಿಕೆ ಬುದ್ಧ ಮತ್ತು ಬೋಧಿಸತ್ವದ ಜೀವನ ಚಿತ್ರಗಳನ್ನು ಬರೆಯಲು ಸಹಾಯ ಮಾಡುವ ಉದ್ದೇಶವೇನಿತ್ತು? ಹೀಗೆ ರೋಮಾಂಚನಕಾರಿ ಇತಿಹಾಸದ ಎಳೆಗಳನ್ನು ಬಿಚ್ಚಿಡುತ್ತಾ ಪದ್ಮಪಾಣಿ ಕಲಾಕೃತಿಯ ಹಿಂದಿನ ರಹಸ್ಯದ ಮೇಲೆ ಬೆಳಕು ಚೆಲ್ಲುತ್ತಾರೆ. ಕಮಲಾಂಬಿಕೆ ವಿಷ್ಣುಶರ್ಮನಿಗೆ ನಿನ್ನ ಚಿತ್ರಕಲೆ ಕಾಲ ದೇಶಗಳನ್ನ ಮೀರಿ ನಿಲ್ಲಬೇಕು ಧರ್ಮದ ಎಲ್ಲೆಯಿಂದ ದೂರ ಹಾರಿ ಅನಂತದಲ್ಲಿ ಮಿಂಚಬೇಕು ಇದು ಬೌದ್ಧಧರ್ಮಕ್ಕೆ ವಾಹನವಾಗಿರದೆ ಪ್ರಪಂಚದ ಎಲ್ಲಾ ಚಿತ್ರಕಲೆಗಳ ಪರಿಶ್ರಮಗಳ ಉತ್ತುಂಗವಾಗಬೇಕು ಅದರ ಸಫಲತೆ ಪಡೆಯಬೇಕೆಂಬ ನನ್ನ ಆಸೆ ಎಂದು ಹೇಳಿ ನಿನ್ನ ಕಲ್ಪನೆ ಮಿತಿಗಳಿಂದ ಆಚೆ ಬಂದು ಬಿಡು ನಿನ್ನ ಕಲ್ಪನೆಗೆ ರೂಪದರ್ಶಿ ಬೇಡವೇ ಎಂದು ಆತನ ಕಣ್ಣುಗಳಲ್ಲಿ ದೃಷ್ಟಿ ನೆಟ್ಟಳು. ಹೀಗೆ ಕಮಲಾಂಬಿಕೆ ವಿಷ್ಣುಶರ್ಮನಲ್ಲಿ ತನ್ನ ಸೌಂದರ್ಯ, ಸುಂದರ ಮೈ ಮಾಟವು ಆತನ ಬಿತ್ತಿಗಳಲ್ಲಿ ನೆಲಗೊಳ್ಳುವಂತೆ ಮಾಡಿದಳು. ವಿಷ್ಣುಶರ್ಮನ ಸತತ ಒಂದು ತಿಂಗಳ ನಂತರ ಪ್ರಯತ್ನದ ಫಲವಾಗಿ ಪದ್ಮಪಾಣಿ ಪಡಿ

ಮೂಡಿತ್ತು. ಚಿತ್ರಣ ಕಾರ್ಯದ ಮೇಲುಸ್ತುವಾರಿ ವಹಿಸಿದ ದಿನ್ನಗರು ಈ ಬಿತ್ತಿಗಳನ್ನು ಸೂಕ್ಷ್ಮವಾಗಿ ಗಮನಿಸಿ ಈ ಪರಿವರ್ತನೆಗೆ ಕಾರಣ ಮೂಲ ಹುಡುಕಿದಾಗ ಕಮಲಾಂಬಿಕೆ ಈ ಚಿತ್ರಣದ ಬಂಧನಕ್ಕೆ ಕಾರಣೀಭೂತಳೆಂಬುದನ್ನು ಕಂಡು ಆಶ್ಚರ್ಯಗೊಂಡರು. ದಿನ್ನಗರು ಕಮಲಾಂಬಿಕೆಯ ಹತ್ತಿರ ಬಂದು ನೀನು ಈ ರೀತಿ ಮಾಡಿದ್ದು ತಪ್ಪು ಎಂದು ಹೇಳಿದಾಗ ಕಮಲಾಂಬಿಕೆಯು ಬೌದ್ಧ ಧರ್ಮದ ತಾತ್ವಿಕತೆಯನ್ನು ಪ್ರಶ್ನಿಸುವುದರ ಜೊತೆಗೆ ಹೆಣ್ಣಿನ ಸಂಕಟವನ್ನು ವ್ಯಕ್ತಪಡಿಸುವುದನ್ನು ಕಾಣಬಹುದು. ಆ ಸಂಕಟವೇ ಪದ್ಮಪಾಣಿ, ವಜ್ರಪಾಣಿ ಆ ಕಲಾಕೃತಿಗೆ ಕಾರಣ ಎಂದು ಹೇಳುತ್ತಾಳೆ

ಹದಿನೈದು ವರ್ಷಗಳ ಹಿಂದೆ ನಮ್ಮಿಬ್ಬರ ಮಧ್ಯೆ ಬೆಳೆದಿದ್ದ ಸಂಬಂಧ ಸುಟ್ಟು ಹಾಕಿ ಬಿಟ್ಟು ಪ್ರೇಮ ಬಂಧವನ್ನು ತೊರೆದು, ನಾನು ನೋವಿನಲ್ಲಿ ಮುಳುಗುತ್ತೇನೆ ಎಂದು ತಿಳಿದಿದ್ದರೂ ನನ್ನ ಬಗ್ಗೆ ಎಳ್ಳಷ್ಟು ಯೋಚಿಸದೆ ಹೋದಿರಿ ಬೌದ್ಧಧರ್ಮವನ್ನು ಸ್ವೀಕರಿಸಿದಿರಿ ಈ ಅಂಶವನ್ನು ಹೇಳುತ್ತಾ ಬೌದ್ಧ ಧರ್ಮದ ತಾತ್ವಿಕತೆಯನ್ನು ಪ್ರಶ್ನಿಸಿ ದಿನ್ನಗರಿಂದ ಆದ ಅನ್ಯಾಯವನ್ನು ತೋರ್ಪಡಿಸುತ್ತಾಳೆ. ಬುದ್ಧನ ಕಾಲದಿಂದಲೂ ಹೀಗೆ ಗಂಡಸರಿಂದ ತಾವು ನಿರ್ವಾಣ ಹೊಂದುವ ಸ್ರೀ ಭಾವನೆಗಳ ವಧೆ ನಿರಂತರವಾಗಿ ಸಾಗುತ್ತಲೇ ಬಂದಿದೆ ಬುದ್ಧ, ನಂದ, ಕಶ್ಯಪ, ದಿನ್ನಗ ಹೀಗೆ ಎಷ್ಟೋ ಸಾವಿರ ಗಂಡಸರು ತಮ್ಮ ನಿರ್ವಾಣಕ್ಕಾಗಿ ನಂಬಿ ಬಂದ ಸ್ತ್ರೀಯರ ಬಾಳನ್ನು ನೋವಿನ ಪ್ರಪಾತಕ್ಕೆ ನೂಕುತ್ತಲೆ ಬಂದಿದ್ದಾರೆ ಎಂದು ವ್ಯಕ್ತಪಡಿಸುತ್ತಾಳೆ. ಯಾವ ಸೌಂದರ್ಯದ ಆಲಿಂಗನವನ್ನು ತಿರಸ್ಕರಿಸಿ ತಾವು ಬೌದ್ಧ ಧರ್ಮವನ್ನು ಅಪ್ಪಿಕೊಂಡಿರೋ ಅದೇ ಸೌಂದರ್ಯ ನಿಮ್ಮ ಸುತ್ತಲೂ ಕುಣಿದು ಕುಪ್ಪಳಿಸಿ ನಿಮ್ಮನ್ನು ಅಣಕಿಸುವಂತೆ ಮಾಡುವ ಹಠ ತೊಟ್ಟೆ ವಿಷ್ಣುಶರ್ಮನನ್ನು ನನ್ನ ಗೊಂಬೆಯಾಗಿಸಿಕೊಂಡು ನನ್ನ ಸೌಂದರ್ಯ ಮತ್ತು ಮೈಮಾಟ ಆ ವಿಹಾರದ ಬಿತ್ತಿಗಳಲ್ಲಿ ವಿಜೃಂಭಿಸುವಂತೆ ಮಾಡಿದೆ ಎಂದಳು, ದಿನ್ನಗರು ಕಮಲಾಂಬಿಕೆ ನನ್ನ ಮೇಲೆ ನಾ ಕೋಪಕ್ಕೆ ಏನು ಮಾಡುತ್ತಿರುವೆ ಎಂದು ಯೋಚಿಸಿರುವೆಯಾ ಶತಶತಮಾನಗಳವರೆಗೆ ಇರುವ ಸ್ಮಾರಕ . ಅದರ ಭವ್ಯತೆಯನ್ನು ನಿನ್ನ ಸೌಂದರ್ಯದ ಏಕತಾನತೆಯಲ್ಲಿ ಹಾಳುಗೆಡುವುತ್ತಿರುವೆ ಎಂಬುದರ ಅರಿವಿದೆಯೇ ಎಂದಾಗ ಬುದ್ದನಂತೆ ನಾನು ಜಗತ್ಪಸಿದ್ಧ ಆಗಬೇಕೆಂಬುದೇ ನನ್ನ ಆಸೆ ಎಂದು ಕಮಲಾಂಬಿಕೆ ಹೇಳುತ್ತಾಳೆ.

ಬುದ್ಧನಿಗೆ ನಿರ್ವಾಣವೇ ಆಸ್ತಿ ಆದರೆ ನನಗೆ ನನ್ನ ಸೌಂದರ್ಯವೇ ಆಸ್ತಿ, ಬರೀ ಚಿತ್ರಗಳ ಸೌಂದರ್ಯದಲ್ಲಿ ಅಷ್ಟೇ ಅಲ್ಲ, ಆಂತರಿಕ ಸಂಯೋಜನೆಯಲ್ಲಿ ನಾನೇ ಅಡಗಿ ಕುಳಿತ್ತಿದ್ದೇನೆ ವಿಷ್ಣುಶರ್ಮ ತನ್ನ ರಚನೆಗೆ ಆರಿಸಿಕೊಂಡ ಸಂಯೋಜನೆ ಪದ್ಮಪಾಣಿ ಕಮಲವನ್ನು ಕೈಯಲ್ಲಿ ಹೊತ್ತ ಬುದ್ಧ ಅಥವಾ ಬೋಧಿಸತ್ವ ಎಂದು, ಅಂದರೆ ನಿಮ್ಮ ಬುದ್ಧನೇ ನನ್ನನ್ನು ನೀವು ತಿರಸ್ಕರಿಸಿದವಳನ್ನು ತನ್ನ ಕೈಯಲ್ಲಿ ಹೊತ್ತಿರುವಂತೆ ಚಿತ್ರಿಸಿದ್ದಾರೆ. ನಿಮ್ಮ ಬುದ್ಧನಷ್ಟೇ ಎಲ್ಲೆಲ್ಲೂ ತುಂಬಿದ್ದೇನೆ ಎನ್ನುವ ಮಾತುಗಳು ದಿನ್ನಗರಿಗೆ ಹೇಳಿದಳು ಇದನ್ನ ಕೇಳಿಸಿಕೊಂಡ ವಿಷ್ಣುಶರ್ಮ ನಾನು ಸಹ ಇವಳ ಬಂಧನಕ್ಕೆ ಬಿದ್ದೆನೆಲ್ಲ ಎಂದು ಜುಗುಪ್ಸೆಗೊಳ್ಳುತ್ತಾನೆ.

ವಿಷ್ಣುಶರ್ಮ ಮನೋವಿಕಲನಾಗಿ ಕಾರ್ಯನಿಲ್ಲಿಸುತ್ತಾನೆ. ಈ ವಿಚಾರ ಹರಿಸೇನನಿಗೆ ತಿಳಿಸುವುದು ಸೂಕ್ತವಲ್ಲ ಹಾಗಾಗಿ ದಿನ್ನಗರು ಬೇರೆ ಕಲೆಗಾರ ನನ್ನ ಹುಡುಕಿ ತರುತ್ತಾನೆ. ಆತನೇ ಕಮಲಾಂಬಿಕೆ ಮಗ. ದಿನ್ನಗರು ಆತನನ್ನು ಗುಹೆಯಲ್ಲಿ ಕರೆದುಕೊಂಡು ಹೋಗುತ್ತಾನೆ. ಕಮಲಾಂಬಿಕೆಯನ್ನು ಸಹ ಕತ್ತಲ ಗುಹೆಯಲ್ಲಿ ನಿಲ್ಲಿಸಿ ಆ ಕಲಾಕೃತಿಯ ಬಗ್ಗೆ ಕಮಲಾಂಬಿಕೆಯ ಮಗನಿಗೆ ಕೇಳಿದಾಗ ಅವನು ಎಂತಹ ಸುಂದರ ಮುಖ, ಎಷ್ಟು ಆಕರ್ಷಕವಾದ ಮೈಕಟ್ಟು ಎಂದಾಗ ಅವಳ ಶರೀರವೆಲ್ಲ ಹಿಂಡಿದ ಹಾಗಾಗಿರಬೇಕು. ಮತ್ತೆ ವೀಕ್ಷಿಸುತ್ತಲೇ ಇದ್ದ ರಾಜಕುಮಾರ ದಿನ್ನಗರೇ ಈ

ಮುಖ ನನಗೇಕೋ ಚಿರಪರಿಚಿತ ಹಾಗೂ ಆಪ್ತವಾಗಿ ಕಾಣುತ್ತಿದೆ ಎಂದಾಗ ಆ ಗುಹೆಯಿಂದ ಆತನನ್ನು ಹೊರಗೆ ಕರೆದುಕೊಂಡು ಹೋಗುತ್ತಾರೆ ಇದನ್ನು ಕೇಳಿಸಿಕೊಂಡ ಕಮಲಾಂಬಿಕೆ ಬಹಳ ಹೊತ್ತಿನ ನಂತರ ಗುಹೆಯಿಂದ ಹೊರ ಬಂದು ದಿನ್ನಗರ ಬಳಿ ಹೋಗಿ ಅವರ ಕಾಲಿನ ಬಳಿ ತನ್ನ ತಲೆಯಿರಿಸಿ ದೀಕ್ಷೆ ಕೋರಿ ಬೌದ್ಧ ಭಿಕ್ಕುಣಿಯಾಗಿ ತನ್ನ ಮುಂದಿನ ಜೀವನ ಕಳೆದಳು, ಇದೆ ಪದ್ಮಪಾಣಿಯ ಹಿಂದಿನ ದುರಂತ ಕಥೆ ಹೀಗೆ ಗಣೇಶಯ್ಯನವರು ಚರಿತ್ರೆಯ ಪುಟಗಳಲ್ಲಿ ದಾಖಲಾಗದ ಎಷ್ಟೋ ಸಂಗತಿಗಳನ್ನ ಪುನಾರಚಿಸುತ್ತಾರೆ. ಚರಿತ್ರೆಯ ಮಿತಿಯನ್ನ ಗುರುತಿಸುತ್ತಾರೆ.

**ಕೆರಳಿದ ಕರಳು**

ಪಾಲುಕ್ಕಮ್ಮ ದೇವತೆಯ ಹಿನ್ನೆಲೆಯಾಧಾರಿಸಿದ ಕಥೆ. ಕೋಲಾರದ ಬಳಿಯ ಒಂದು ವಂಶದ ಕೊಡೆಯನ್ನು ಉಳಿಸುವ ಸಲುವಾಗಿ ಅಲ್ಲಿನ ಮೂಲದೇವತೆ ನಿಜಕ್ಕೂ ಬೆಂಕಿ ಇಲ್ಲದೆ ಹಾಲನ್ನು ಉಕ್ಕಿಸಿದಳೆ? ಕೋಟಿಗಾನಹಳ್ಳಿಯ ಮೂಲಪುರುಷ ಕೋಟೆಗಣ್ಣ ಸುಮಾರು ಐದಾರು ಶತಮಾನಗಳ ಹಿಂದೆ ಇಲ್ಲೇ ನೆಲೆಸಿದಾತ. ಒಮ್ಮೆ ಕಾಡಿನಲ್ಲಿ ಬಿಡಾರ ಹೂಡಿದ, ತನ್ನ ಮಗುವಿಗೆ ಬಿಸಿ ಹಾಲು ಬೇಕಾಗಿತ್ತು. ಮಳೆ ಬಂದಿದ್ದ ಕಾರಣ ಬೆಂಕಿ ಹತ್ತಲಿಲ್ಲ ಆದರೆ ಅಲ್ಲಿನ ಪವಾಡ ನಡೆಯಿತು. ಬೆಂಕಿ ಇಲ್ಲದೆ ಹಾಲುಕ್ಕಿ, ಹಾಲನ್ನು ಮಗುವಿಗೆ ನೀಡಿದ ಶಕ್ತಿಯೇ ಹಾಲುಕ್ಕಮ್ಮ ದೇವತೆ.

ಪಾಲುಕ್ಕಮ್ಮ ಪವಾಡ ನಿಜವೇ ಎಂದು ನಿರೂಪಕರು ವೈಜ್ಞಾನಿಕ ಆಧಾರ ಹುಡುಕಿದರೂ ಮಾಹಿತಿ ಸಿಗುವುದಿಲ್ಲ ಸ್ಥಳೀಯ ಹಿರಿಯರಿಂದ ಪಾಲುಕ್ಕಮ್ಮನ ಚರಿತ್ರೆ ಹಿನ್ನೆಲೆ ತಿಳಿಯುತ್ತದೆ. ಮೂರ್ತಿಯ ಬಿರುಕು ನಲ್ಲಿದ್ದ ತಾಳೆಗರಿಯಲ್ಲಿ ದೊರೆತ ಮಾಹಿತಿಯಿಂದ ಪಾಲುಕ್ಕಮ್ಮನ ನೈಜ ಸಂಗತಿ ದೊರೆಯುತ್ತದೆ.

ಬೆಂಕಿ ಇಲ್ಲದೆ ಹಾಲು ಉಕ್ಕಿಸಿದ ಪವಾಡವು ಇದು ಸತ್ಯವಲ್ಲ, ಕೋಟೆಗಣ್ಣನ ವಂಶದ ಕುಡಿಯನ್ನು ಉಳಿಸಿದ್ದು ಕಾಡಿನ ಬಿಡಾರದಲ್ಲಿ ತಂಗಿದ್ದ ಅಕ್ಕಮ್ಮ ಎಂಬ ಮಹಿಳೆ ಆತನ ವಂಶದ ಕುಡಿಯನ್ನು ಹುಲಿಯ ದಾಳಿಯಿಂದ ರಕ್ಷಿಸಿ ಮಗುವಿಗೆ ತನ್ನೆದೆಯ ಹಾಲು ನೀಡಿ ಪೋಷಿಸಿದಳು. ಆ ಮಗುವಿನ ತಾಯಿ ಅಕ್ಕಮ್ಮ ನಮ್ಮ ಕುಲದೇವತೆ ನಮ್ಮ ರಕ್ಷಕಳು ಎಂದು ದೈವೀರೂಪ ಕೊಟ್ಟಳು. ಆ ಹೆಸರೇ ಮುಂದೆ ಪಾಲುಕ್ಕಮ್ಮನಾಗಿ ಬೆಳೆದ ದೇವತೆ ನಿರೂಪಕರಿಗೆ ನೈಜ ಕತೆ ದೊರೆಯುತ್ತದೆ. ಚರಿತ್ರೆ ಮರು ನಿರೂಪಿಸುತ್ತ ಜನರ ನಂಬಿಕೆಯಲ್ಲಿರುವುದೇ ವಾಸ್ತವ ಎನ್ನುವಂತೆ ಹೇಳಿದಾಗ ಅದರ ಆಚೆಗೂ ಸತ್ಯ ಇರುತ್ತದೆ, ಇರಬಹುದು ಅಂತೆಯೇ ಒಂದೇ ಸಂಗತಿ ಹಲವಾರು ಸಾಧ್ಯತೆ ಹೊಂದುವ ಅವಕಾಶವಿರುತ್ತದೆ ಎಂಬುದನ್ನು ಈ ಕಥನ ಸಾರುತ್ತದೆ.

**ಮರಳ ತೆರೆಗಳೊಳಗೆ**

ಒಂದು ಕಾಲದಲ್ಲಿ ಹೊಯ್ಸಳರ ಆರ್ಥಿಕ ಹಾಗೂ ಧಾರ್ಮಿಕ ಕೇಂದ್ರವಾಗಿದ್ದ ತಲಕಾಡು ನಗರ ಆಲಮೇಲಮ್ಮನ ಶಾಪದಿಂದಾಗಿ ಮರಳಿನಿಂದ ತುಂಬಿಕೊಂಡಿದೆ. ಮೈಸೂರು ಅರಸರನ್ನು ಆಕೆಯ ಶಾಪ ತಟ್ಟಿದ್ದು ಎಷ್ಟು ಸತ್ಯ ಎಂಬುದನ್ನು ಮರಳ ತೆರೆಗಳೊಳಗೆ ಎಂಬ ಕತೆಯಲ್ಲಿ ಗೋಚರಿಸದ ಚಾರಿತ್ರಿಕ ಸಂಗತಿಗಳನ್ನು ನಿರೂಪಿಸುತ್ತಾರೆ.

***ತಲಕಾಡು ಮರಳಾಯಿತು ನನ್ನ ದೊರೆಗೆ***
***ಮಾಲಂಗಿ ಮಡುವಾಗಲಿ ನನಗೆ***
***ದೇವರೇ, ವಂಶವೇ ಇಲ್ಲವಲ್ಲ ರಾಯರಿಗೆ***

ಎನ್ನುವ ಮಾತು, ಅಲಮೇಲಮ್ಮನ ಗಂಡ ರಂಗರಾಯ ಬೆನ್ನುಫಣಿ ರೋಗಕ್ಕೆ ತುತ್ತಾಗಿ ತಲಕಾಡಿನಲ್ಲಿ ಮರಣ ಹೊಂದುತ್ತಾನೆ. ಅಲಮೇಲಮ್ಮ ರಾಯರ ರೋಗ ವಾಸಿಗೆ ಅಡ ಇಟ್ಟಿದ್ದ ಒಡವೆಗಳು ಮೈಸೂರು ಅರಸರಿಗೆ ಸಂಬಂಧಿಸಿದ್ದು ತಮಗೆ ಒಪ್ಪಿಸಬೇಕಂದಾಗ ಶೆಟ್ಟಿ ಮರಳಿ ಕೊಡುವುದಿಲ್ಲ, ತಮ್ಮ ವಂಶಕ್ಕೆ ದಕ್ಕೆ ಬರಬಾರದೆಂದು ಮಾಲಂಗಿ ಮಗುವಿನಲ್ಲಿ ಪ್ರಾಣ ತ್ಯಾಗ ಮಾಡಿದಳೆಂಬ ಸುದ್ದಿಯನ್ನ ತಿರುಚಿ ಬೇರೆ ಹಬ್ಬಿಸಿದ ನಮ್ಮ ವಂಶಕ್ಕೆ ಮಕ್ಕಳಿಲ್ಲವಲ್ಲ ಎಂದಿದ್ದನ್ನು ಈ ಸಾಲುಗಳನ್ನ ಶೆಟ್ಟಿ,

ಜನರು ಕ್ರಮೇಣವಾಗಿ ಅವರ ಬಾಯಲ್ಲಿ ತಿರುಚಿ ಈ ರೀತಿಯಾಗುತ್ತದೆ.

***ತಲಕಾಡು ಮರುಳಾಗಲಿ***
***ಮಾಲಂಗಿ ಮಡುವಾಗಲಿ***
***ರಾಜರ ವಂಶಕ್ಕೆ ಮಕ್ಕಳಿಲ್ಲದಾಗಲಿ***

ಎನ್ನುವ ಸುದ್ದಿ ಹಬ್ಬುತ್ತದೆ. ಈ ಮೇಲಿನ ವಾಕ್ಯಗಳನ್ನ ಗಮನಿಸಿದಾಗ ಅವು ಶಾಪದ ವಾಕ್ಯದಂತಿಲ್ಲ ಎಂದು ಗಿರಿಜರವರು ತಿಳಿಸಿದರು. ಆಲಮೇಲಮ್ಮನ ಕತೆಯನ್ನು ಕನಕಜ್ಜಿಯು ಅವಳ ದುರಂತ ಕಥೆಯನ್ನು ಹೇಳುತ್ತಾರೆ. ತಲಕಾಡು ಮರಳಾಗುವುದಕ್ಕೂ ಕೆಲವೊಂದು ವೈಜ್ಞಾನಿಕ ಆಧಾರಗಳನ್ನು, ಮೈಸೂರು ಯಾವ್ಯಾವ ರಾಜರಿಗೆ ಮಕ್ಕಳಾಗಿರುವ ಮಾಹಿತಿಯನ್ನು ಕೊಟ್ಟು ಸಾಭೀತು ಪಡಿಸುತ್ತಾರೆ. ಆಲಮೇಲಮ್ಮನ ಶಾಪವೂ ಚರಿತ್ರೆಯಲ್ಲಿ ಎಷ್ಟು ಸತ್ಯ, ಅಸತ್ಯ, ವಾಸ್ತವ, ಅವಾಸ್ತವಗಳೇನು ಎಂಬುದನ್ನು ನೈಜ, ಮೌಖಿಕ ಸಂಗತಿಗಳನ್ನ ಮೂಲಕ ಚರಿತ್ರೆಯ ಗ್ರಹಿಕೆಯನ್ನು ಮರು ನಿರೂಪಿಸುತ್ತಾರೆ.

ಹೀಗೆ ಪುರಾಣದೊಳಗೆ ಹೂತು ಹೋತುಗಿರುವ ಸಂಗತಿಗಳನ್ನು ಸತ್ಯದ ನೆಲೆಯಲ್ಲಿ ಶೋಧಿಸುವುದರ ಮೂಲಕ ಹೊಸ ಚರಿತ್ರೆಯನ್ನು ಕಟ್ಟುತ್ತಾರೆ. ಇವರ ಬಹಳಷ್ಟು ಕತೆಗಳು ನೈಜ ಘಟನೆಗಳ ಚರ್ಚೆಯ ಫಲಗಳು ಹಾಗೂ ಗೋಚರ ವಸ್ತುಗಳು, ಕತೆಗಳಿಗೆ ಆಧಾರವಾಗಿವೆ. ಅವುಗಳಲ್ಲಿ ಸತ್ಯ ಮತ್ತು ಕಲ್ಪನೆಯಲ್ಲಿ ಸ್ವಾಭಾವಿಕವಾಗಿ ಬೆರೆತಿವೆ. ಚರಿತ್ರೆಯಲ್ಲಿ ಅಡಗಿದ ಸಂಗತಿಗಳನ್ನು ಹೊರತೆಗೆದು ಇವತ್ತಿನ ಸಂದರ್ಭಕ್ಕೆ ಅನ್ವಯಿಸಿ ಭವಿಷ್ಯದ ಬದುಕನ್ನು ಕಲಾತ್ಮಕವಾಗಿ ರೂಪಿಸುವಲ್ಲಿ, ಚರಿತ್ರೆಯೊಡನೆ ಅನುಸಂಧಾನಗೊಳಿಸುವ ಯತ್ನಗಳು ಸೃಜನಶೀಲ ಬರಹವನ್ನು ಗಣೇಶಯ್ಯನವರ ಕಥೆಗಳಲ್ಲಿ ಹೊಸ ಸಾಧ್ಯತೆಗಳನ್ನ ಕಾಣಬಹುದು.

**ಪರಾಮರ್ಶನ ಗ್ರಂಥಗಳು**


- ಬಸವರಾಜ ಸಾದರ. (2019). *ಇಪ್ಪತ್ತನೆಯ ಶತಮಾನದ ಕನ್ನಡ ಘಟ್ಟಗಳು.* ಕರ್ನಾಟಕ ವಿದ್ಯಾವರ್ಧಕ ಸಂಘ.
- ಗಣೇಶಯ್ಯ, ಕೆ. ಎನ್. (2022). *ಪದ್ಮಪಾಣಿ–ಕಥಾ ಸಂಕಲನ.* ಅಂಕಿತ ಪುಸ್ತಕ ಪ್ರಕಾಶನ.
- ತಿಪ್ಪೇಸ್ವಾಮಿ ಜಿ.ಆರ್. (ಸಂ.). (2021). *ಆಧುನಿಕ ಕಥನ ಸಾಹಿತ್ಯ ಚರಿತ್ರೆ ಸಂಪುಟ–4: ಸಣ್ಣಕಥೆ.* ಕನ್ನಡ ಸಾಹಿತ್ಯ ಪರಿಷತ್.